**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟ, ಉಪಸ್ಥಿತಿ- ಜಮಖಂಡಿ**

**ಸ್ಪೇಷಲ್ ಕೇಸ್ ನಂ. 5013/2023**
**ಪಿಡಬ್ಲ್ಯೂ-1**
**ಸಿಡಬ್ಲ್ಯೂ- 2**

| | |
|---|---|
| ಹೆಸರು | : ಯಾಶೀನ ಹಸನಸಾಬ ದ್ರಾಕ್ಷಿ |
| ವಯಸ್ಸು | : 44 ವರ್ಷ |
| ಉದ್ಯೋಗ | : ಉಪ ತಹಶೀಲ್ದಾರ, ಸಾವಳಗಿ |
| ವಾಸಸ್ಥಳ | : ಕುಲಹಳ್ಳಿ, ತಾಃ ರಬಕವಿ-ಬನಹಟ್ಟಿ |

====

**ಸಾಕ್ಷಿಗೆ ಇಂದು ದಿನಾಂಕ 22.11.2023 ರಂದು ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ**

ನಾನು 2015 ರಿಂದ 2021 ರವರೆಗೆ ಸಾವಳಗಿಯಲ್ಲಿ ಕಂದಾಯ ನಿರೀಕ್ಷಕರಾಗಿ ಕೆಲಸ ಮಾಡಿರುತ್ತೇನೆ.

2. ದಿನಾಂಕ 04.11.2019 ರಂದು ಸಾವಳಗಿ ಠಾಣೆಯ ನಿರೀಕ್ಷಕರು ನನಗೆ ಮತ್ತು ಗ್ರಾಮ ಲೆಕ್ಕಾಧಿಕಾರಿಗಳಾದ ಚಾಸಾ-3 ರವರಿಗೆ ಹಿರೇಪಡಸಲಗಿ ಗ್ರಾಮದ ಮಂಜುನಾಥ ಧರೆಪ್ಪ ಗುಗ್ಗರಿ ಈತನು ತನ್ನ ತೋಟದ ಮನೆಯಲ್ಲಿ ಅಕ್ರಮವಾಗಿ ಗಾಂಜಾ ಸಂಗ್ರಹಿಸಿಟ್ಟಿರುವ ಬಗ್ಗೆ ದಾಳಿಯಲ್ಲಿ ಪಂಚರಾಗಿ ಭಾಗವಹಿಸಬೇಕೆಂದು ಕೋರಿದ್ದು, ಅದಕ್ಕೆ ನಾವುಗಳು ಒಪ್ಪಿ , ಮುಂಜಾನೆ 8.45 ಕ್ಕೆ ಜಮಖಂಡಿ ಸಿ.ಪಿ.ಐ ರವರ ಕಚೇರಿಗೆ ಹೋಗಿರುತ್ತೇವೆ. ಬಳಿಕ ಚಾ.ಸಾ.1, ಪತ್ರಾಂಕಿತ ಅಧಿಕಾರಿಗಳಾದ ಚಾ.ಸಾ.4 ಹಾಗೂ ಪೋಲಿಸ ಸಿಬ್ಬಂದಿಯವರಾದ ಚಾ.ಸಾ.5 ರಿಂದ 11 ರವರೊಂದಿಗೆ ಬೆಳಿಗ್ಗೆ 9.30 ಕ್ಕೆ ಸಿ.ಪಿ.ಐ ರವರ ಕಚೇರಿಯಿಂದ ಹೊರಟು, ಬೆಳಿಗ್ಗೆ 10.30 ರ ಸುಮಾರಿಗೆ ಹಿರೇಪಡಸಲಗಿ ಗ್ರಾಮದ ಅಡಿಹುಡಿ ಕ್ರಾಸ್ ಬಳಿ ತೂಕಮಾಡುವ ಯಂತ್ರ ತೆಗೆದುಕೊಂಡು, ಬೆಳಿಗ್ಗೆ 10.45 ರ ಸುಮಾರಿಗೆ ಬಾತ್ಮಿ ಸ್ಥಳದ ಸಮೀಪ ಹೋಗಿ ವಾಹನಗಳನ್ನು ನಿಲ್ಲಿಸಿ ಬಾತ್ಮಿ ಬಂದ ಮನೆಯ ಮುಂದೆ ಇರುವ ದನಗಳ ಶೆಡ್ಡಿನ ಹತ್ತಿರ ನಿಂತು ನೋಡಲು ಮನೆಯ ಪಡಸಾಲೆಯಲ್ಲಿ ಒಬ್ಬ ವ್ಯಕ್ತಿ ಗಾಂಜಾ ಚೀಲ

ಹಿಡಿದಿದ್ದು, ಮತ್ತೊಬ್ಬ ಅದರಲ್ಲಿ ಏನೋ ತುಂಬುವುದು ಕಂಡುಬಂದಿರುತ್ತದೆ. ಅವರಿಬ್ಬರೂ ಗಾಂಜಾವನ್ನು ಚೀಲದಲ್ಲಿ ತುಂಬುತಿದ್ದಾರೆ ಎಂದು ಖಾತ್ರಿಯಾಗಿ ನಾವೆಲ್ಲರೂ ಮನೆಯಲ್ಲಿ ದಾಳಿಮಾಡಿ, ಸದರಿ ವ್ಯಕ್ತಿಗಳಿಗೆ ಹಿಡಿದು, ಅವರ ಹೆಸರು, ವಿಳಾಸವನ್ನು ಪಡೆದುಕೊಂಡಿದ್ದು, ಆ ವ್ಯಕ್ತಿಗಳು ತಮ್ಮ ಜಮೀನಿನ ಕಬ್ಬಿನ ಬೆಳೆಯಲ್ಲಿ ಬೆಳೆದ ಗಾಂಜಾವನ್ನು ಮಾರಾಟ ಮಾಡುವ ಸಲುವಾಗಿ ಒಣಗಿಸಿ, ಮಾರಾಟಕ್ಕೆ ಒಯ್ಯಲು ಚೀಲದಲ್ಲಿ ತುಂಬುತ್ತಿರುವುದಾಗಿ ತಿಳಿಸಿರುತ್ತಾರೆ. ಬಳಿಕ ಸಿ.ಪಿ.ಐ ರವರು ಗಾಂಜಾವನ್ನು ತೂಕಮಾಡಲಾಗಿ ಒಟ್ಟು 4 ಕೆ.ಜಿ.900 ಗ್ರಾಂ ಇದ್ದು, ಅದನ್ನು ಆರೋಪಿತರು ಪ್ರತಿ ಕೆ.ಜಿ.ಗೆ 10,000/- ರೂ. ಗಳಂತೆ ಮಾರಾಟ ಮಾಡಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ. ಬಳಿಕ ಜಪ್ತಾದ ಗಾಂಜಾದಿಂದ 100 ಗ್ರಾಂ ಮಾದರಿಯನ್ನು ತೆಗೆದು ಒಂದು ಬಿಳಿಬಟ್ಟೆಯಲ್ಲಿ ಹಾಕಿ ಪ್ಯಾಕ್ ಮಾಡಿ, ಅವುಗಳಿಗೆ ಚೀಟಿ ಅಂಟಿಸಿ, ಅರಗು ಮತ್ತು ಮೊಹರು ಹಚ್ಚಿರುತ್ತಾರೆ. ಆರೋಪಿಗಳು ಗಾಂಜಾವನ್ನು ತಮ್ಮ ಮನೆಯ ಹಿಂದೆ ಇರುವ ಕಬ್ಬಿನ ಬೆಳೆಯಲ್ಲಿ ಬೆಳೆದಿರುವುದಾಗಿ ತಿಳಿಸಿದ್ದು, ಅಲ್ಲಿ ತಪಾಸಣೆ ಮಾಡಲಾಗಿ ಯಾವುದೇ ಗಾಂಜಾ ಗಿಡಗಳು ಇರಲಿಲ್ಲ. ಈ ಬಗ್ಗೆ ಚಾ.ಸಾ.1 ರವರು ಲ್ಯಾಪಟಾಪಿನಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30 ರ ವರೆಗೆ ಚಾ.ಸಾ.7 ರವರ ಮೂಖೇನ ಪಂಚನಾಮೆಯನ್ನು ಟೈಪ್ ಮಾಡಿಸಿ, ಸ್ಥಳದ ಕಚ್ಚಾನಕಾಶೆಯನ್ನು ತಯಾರಿಸಿ, ಈಗ ತೋರಿಸುತ್ತಿರುವ 3 ಫೋಟೋಗಳನ್ನು ತೆಗೆಸಿರುತ್ತಾರೆ. ನಂತರ ಆರೋಪಿತರು ಹಾಗೂ ಮುದ್ದೆಮಾಲಿನೊಂದಿಗೆ ಠಾಣೆಗೆ ಬಂದು, ಚಾ.ಸಾ.1 ರವರು ಪಂಚನಾಮೆಯನ್ನು ಪ್ರಿಂಟ್ ತೆಗೆದುಕೊಟ್ಟಿದ್ದು, ಅದಕ್ಕೆ ನಾನು ಮತ್ತು ಚಾ.ಸಾ.3 ಸಹಿ ಹಾಕಿರುತ್ತೇವೆ. **ಪಂಚನಾಮೆಯನ್ನು ನಿ.ಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿ ಮತ್ತು ಸಾಕ್ಷಿ ಗುರ್ತಿಸಿರುವ ಚಾ.ಸಾ.3 ರವರ ಸಹಿಗಳನ್ನು ನಿ.ಪಿ.1(ಎ) ಮತ್ತು ನಿ.ಪಿ.1(ಬಿ) ಎಂದು, ಕಚ್ಚಾ ನಕಾಶೆಯನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿ ಮತ್ತು ಸಾಕ್ಷಿ ಗುರ್ತಿಸಿರುವ ಚಾ.ಸಾ.3 ರವರ ಸಹಿಗಳನ್ನು ನಿ.ಪಿ.2(ಎ) ಮತ್ತು ನಿ.ಪಿ.2(ಬಿ) ಹಾಗೂ ಫೋಟೋಗಳನ್ನು ನಿ.ಪಿ.3 ರಿಂದ 5 ಎಂದು ಗುರುತಿಸಲಾಯಿತು. ಮಾದರಿಗಾಗಿ ಪ್ರತ್ಯೇಕಗೊಳಿಸಿದ ಗಾಂಜಾವನ್ನು ಮು.ಮಾ.1 ಎಂದು ಗುರ್ತಿಸಲಾಯಿತು.** ದಾಳಿ ಕಾಲಕ್ಕೆ ಮನೆಯಲ್ಲಿದ್ದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ಇರುತ್ತಾರೆ.

**ಪಿಡಬ್ಲ್ಯೂ-1**
**ಸಿಡಬ್ಲ್ಯೂ- 2**

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ ಸಿ ಎಚ್ ವಕೀಲರಿಂದ**

3. ನವೆಂಬರ್-2019 ರಲ್ಲಿ ನಾನು ಜಮಖಂಡಿಯಲ್ಲಿ ವಾಸಮಾಡುತ್ತಿದ್ದೆ. ಪಂಚನಾಮೆಗೆ ಬರಲು ನನಗೆ ಯಾವುದೇ ನೋಟಿಸ್ ಕೊಟ್ಟಿರುವುದಿಲ್ಲ. ಕಚೇರಿಯ ವೇಳೆ ಬೆಳಿಗ್ಗೆ 10.30 ರಿಂದ ಸಂಜೆ 5.30 ರ ವರೆಗೆ ಇರುತ್ತದೆ. ಕಚೇರಿಯ ದಿನಚರಿ ನಿರ್ವಹಿಸುತ್ತೇನೆ. ಅದರಲ್ಲಿ ದಾಳಿಯಲ್ಲಿ ಪಾಲ್ಗೊಂಡಿದ್ದ ಬಗ್ಗೆ ನಮೂದು ಮಾಡಿರುತ್ತೇನೆ. ಅದನ್ನು ಸಿ.ಪಿ.ಐ ರವರು ಪಡೆದುಕೊಂಡಿರುವುದಿಲ್ಲ. ದಾಳಿ ಸ್ಥಳಕ್ಕೆ ಚಾ.ಸಾ.4 ರವರೊಂದಿಗೆ ಅವರ ವಾಹನದಲ್ಲಿ ಹೋಗಿರುತ್ತೇವೆ. ಬಾತ್ಮಿ ಸ್ಥಳವನ್ನು ಪಿ.ಎಸ್.ಐ ರವರು ತೋರಿಸಿರುತ್ತಾರೆ. ಬಾತ್ಮಿ ಮನೆ ಇದ್ದ ಜಮೀನಿನ ಸರ್ವೇ ನಂಬರ ಹೇಳಲು ಬರುವುದಿಲ್ಲ. ಸದರಿ ಜಮೀನು ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ತೋಟದ ಮನೆ ಯಾರ ಹೆಸರಿನಲ್ಲಿ ಇದೆ ಎಂಬುದು ಗೊತ್ತಿಲ್ಲ. ದಾಳಿ ಕಾಲಕ್ಕೆ ಮನೆಯ ಹೆಣ್ಣುಮಕ್ಕಳು ಯಾರೂ ಇರಲಿಲ್ಲ.

4. ಮನೆಯ ಬಳಿ ದನದ ಶೆಡ್ಡಿನ ಹತ್ತಿರ ನಿಂತು ನೋಡಿರುತ್ತೇವೆ. ನಿ.ಪಿ.2 ರಲ್ಲಿ ದನದ ಶೆಡ್ಡು ಇರುವ ಬಗ್ಗೆ ಕಾಣಿಸಿಲ್ಲ ಅಂದರೆ ಸರಿ. ಅಂತೆಯೇ ಅದರಲ್ಲಿ ಯಾರ ಮನೆ ಎಂಬುದೂ ನಮೂದು ಇಲ್ಲ ಅಂದರೆ ಸರಿ. ದಾಳಿ ಕಾಲಕ್ಕೆ ಅಕ್ಕಪಕ್ಕದವರು ಯಾರೂ ಸೇರಿದ್ದಿಲ್ಲ. ತೂಕಮಾಡಲು ಪೋಲಿಸರು ಯಾರನ್ನೋ ಕರೆಸಿದ್ದರು, ಅವರು ಯಾರು ಎಂದು ನನಗೆ ಗೊತ್ತಿಲ್ಲ. ಮಾದರಿ ತೆಗೆದಿದ್ದನ್ನು ಏನೆಂದು ಮೊಹರು ಹಾಕಿ ಸೀಲ್ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ದಾಳಿಯಲ್ಲಿ ಪಾಲ್ಗೊಂಡಿದ್ದ ಬಗ್ಗೆ ಯಾವುದೇ ಹಾಜರಾತಿ ಪತ್ರ ಕೊಟ್ಟಿಲ್ಲ. ನಾನು ಸಾವಳಗಿ ಠಾಣೆಯಲ್ಲಿ ಖಾಯಂ ಪಂಚನಾಗಿದ್ದು, ಈ ರೀತಿಯ 7-8 ಪ್ರಕರಣಗಳಲ್ಲಿ ಪಂಚನಾಗಿ ಭಾಗವಹಿಸಿರುತ್ತೇನೆಂದರೆ 2 ಪ್ರಕರಣಗಳಲ್ಲಿ ಇರುತ್ತೇನೆ ಎಂದು ಹೇಳುತ್ತೇನೆ.

5. ಚಾ.ಸಾ.4 ರವರ ಸೂಚನೆಯ ಮೇರೆಗೆ ನಾನು ಮತ್ತು ಚಾ.ಸಾ.3 ದಾಳಿಯಲ್ಲಿ ಪಂಚರಾಗಿ ಭಾಗವಹಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬಾತ್ಮಿ ಮನೆಯಲ್ಲಿ ಒಬ್ಬ ವ್ಯಕ್ತಿ ಚೀಲ ಹಿಡಿದಿದ್ದು ಮತ್ತೊಬ್ಬ ಅದಕ್ಕೆ ಗಾಂಜಾ

ತುಂಬುತ್ತಿದ್ದು ಕಂಡುಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಾಂಜಾದಿಂದ ಮು.ಮಾ.1 ಮಾದರಿ ತೆಗೆದಿರುತ್ತೇವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬಾತ್ಮಿ ಮನೆಯಲ್ಲಿ ಇದ್ದ ವ್ಯಕ್ತಿಗಳು ಆರೋಪಿಗಳೇ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ ಯಾವುದೇ ಸಬಂಧ ಇಲ್ಲದಿದ್ದರೂ, ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ. ಸರಿ ಅದೆ.

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.